**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ಶ್ರೀ ರಂಗನಾಥ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುಜ್ಜಾಡಿ ಗ್ರಾಮ ಪಂಚಾಯತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಪತ್ರ ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/7225/2014/ಪಿಪಿ, ದಿನಾಂಕ: 09.05.2017..

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(1) ಮತ್ತು 12(3)ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 07-04-2017 ರ ವರದಿಯಲ್ಲಿ ದೂರುದಾರರಾದ ಶ್ರೀ ಮಂಜುನಾಥ ಆಚಾರಿ ಇವರು ತಮ್ಮ ಪಿತ್ರಾರ್ಜಿತ ಆಸ್ತಿಯಾದ ಗುಜ್ಜಾಡಿ ಗ್ರಾಮದ ಸರ್ವೇ ನಂ.55\2 ರ ಜಮೀನು ವಾರಸನಾಥೆಯ ಮೇರೆಗೆ ದೂರುದಾರರು ಮತ್ತು ಅವರ ಸಹೋದರಿಯರು ಮತ್ತು ದಾಯಾದಿಗಳು ಹಕ್ಕುದಾರರಾಗಿರುತ್ತಾರೆ. ಆದರೆ, ಈ ಬಗ್ಗೆ ಭಿಭಾಗ ಪತ್ರವಾಗಿರುವುದಿಲ್ಲ. ದೂರುದಾರರ ದಾಯಾದಿಯಾದ ಶ್ರೀ ನಾರಾಯಣ ಆಚಾರಿ ಇವರು ಇತರೆ ವಾರಸುದಾರರ ಕುಮ್ಮಕಿನಿಂದ ಸರ್ವೇ ನಂ.55\2 ರ ಜಮೀನಿನಲ್ಲಿ ಪ್ಲೈನಿಂಗ್ ಮಷೀನ್ ಅಳವಡಿಸಿ ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ. ಇದಲ್ಲದೇ ಇನ್ನೋಂದು ಸ್ಥಳದಲ್ಲಿ ಅಕ್ರಮವಾಗಿ ಪರಿವರ್ತಿಸಿ ಮನೆ ಕಟ್ಟಲು ಪರವಾನಗೆಯನ್ನು ಗ್ರಾಮ ಪಂಚಾಯತಿ ವತಿಯಿಂದ ಪಡೆದಿರುತ್ತಾರೆ. ಪಡೆದಿರುವ ವಿದ್ಯುತ್ ಸಂಪರ್ಕವು ಸಹ ಅನಧೀಕೃತವಾಗಿರುತ್ತದೆ. ದಾಯಾದಿ ಶ್ರೀ ಮಹಾಬಲ ಆಚಾರಿಯವರ ಪತ್ನಿ ಶ್ರೀಮತಿ ಸುಬ್ಬಮ್ಮ ಆಚಾರ್ತಿ ಇವರು ಗುಜ್ಜಾಡಿ ಗ್ರಾಮದ ಸರ್ವೇ ನಂ.41/5 ರಲ್ಲಿ ಪಂಚಾಯತಿ ವತಿಯಿಂದ ಅನುಮತಿ ಪಡೆದು ಮನೆ ಕಟ್ಟಿರುತ್ತಾರೆ. ಕಹಾಘೂ ಅದೇ ಗ್ರಾಮದ ಸರ್ವೇ ನಂಬರ್ 55/1 ರಲ್ಲಿ ತನ್ನ ಮಗನಾದ ನಾರಾಯಣಚಾರಿಗೆ ಮನೆ ಕಟ್ಟಲು ಪಂಚಾಯತಿಗೆ ಅರ್ಜಿ ಸಲ್ಲಿಸಿ ಪರವಾನಗೆ ಪಡೆದಿರುತ್ತಾರೆ. ಆದರೆ ಪರವಾನಗೆ ಪಡೆಯಲು ಸಲ್ಲಿಸಿದ ಅರ್ಜಿಯಲ್ಲಿ ನೀಡಿದ್ದ ಮಾಹಿತಿಗಳು ತಪ್ಪಿನಿಂದ ಕೂಡಿದ್ದು ಪರಿಶೀಲಿಸದೇ ಪರವಾನಗೆ ನೀಡಿರುತ್ತಾರೆ. ಹಾಗೂ ಸದರಿ ಆಸ್ತಿಗೆ ಸಂಬಂಧಿಸಿದ ಶ್ರೀ ದಿನೇಶ್ ಆಚಾರಿ ಇವರಿಗೆ ಸರ್ವೇ ನಂ 41/5 ಹಾಗೂ 55/1 ರ ಜಾಗದಲ್ಲಿ 8 ರಿಂದ 9 ವರ್ಷಗಳ ಹಿಂದೆಯೇ ಕಮನೆ ಕಟ್ಟಿಕೊಂಡು ವಾಸಿಸುತ್ತಿದ್ದಾರೆ ಹಾಗೂ ಗಿಡಮರಗಳನ್ನು ಸಹ ಬೆಳೆಸಿರುತ್ತಾರೆಂದು ಹಾಗೂ ಕರವಸೂಲಾತಿ ರಿಜಿಸ್ಟರ್ ಅನ್ನು ಸಹ ಸರಿಯಾಗಿ ನಿರ್ವಹಿಸಿರುವುದಿಲ್ಲವೆಂದು ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ ಎಂದು ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ ಎದುರುದಾರರಾದ ಶ್ರೀ ರಂಗನಾಥ್ ಇವರಿಗೆ ಉಡುಪಿಯ ಈ ಸಂಸ್ಥೆಯ ಪೊಲೀಸ್ ನಿರೀಕ್ಷಕರು ನೋಟೀಸನ್ನು ಜಾರಿ ಮಾಡಿರುವ ಬಗ್ಗೆ ಸ್ವೀಕೃತಿಯನ್ನು ಕಳುಹಿಸಿರುತ್ತಾರೆ. ಸದರಿ ಸ್ವೀಕೃತಿಯ ಪ್ರತಿಯನ್ನು ಹಾಜರುಪಸಿರುತ್ತಾರೆ ಎಂದು ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಶ್ರೀ ಮಂಜುನಾಥ ಆಚಾರಿ ಅಂದರೆ ದೂರುದಾರರು ದಿ:26/11/2013 ರಂದು ಸರ್ವೇ ನಂಬರ್ 55/2 ರಲ್ಲಿ ಮನೆ ಕಟ್ಟುವ ಬಗ್ಗೆ ಗ್ರಾಮ ಪಂಚಾಯತಿ ಕಾರ್ಯಾಲಯ, ಗುಜ್ಜಾಡಿ ಇಲ್ಲಿ ಆಕ್ಷೇಪಣೆ ಸಲ್ಲಿಸಿದ್ದು, ಸದರಿ ಆಕ್ಷೇಪಣೆ ಪ್ರತಿಯನ್ನು ಹಾಜರುಪಡಿಸಲಾಗಿದೆ. ದೂರುದಾರರು ಶ್ರೀಮತಿ ಸುಬ್ಬಮ್ಮ ಇವರು ಗುಜ್ಜಾಡಿ ಗ್ರಾಮದ ಸರ್ವೇ ನಂ.55/2ರ 76 ಸೆಂಟ್ಸ್ ಜಾಗದಲ್ಲಿ ಶ್ರೀಮತಿ ಸುಬ್ಬಮ್ಮರವರು ಮನೆಕಟ್ಟುತ್ತಿರುವ ಬಗ್ಗೆ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಸರ್ವೇ ನಂಬರ್ 55/2 ಮೇಲೆ ಹೇಳಿದಂತೆ ಶ್ರೀಮತಿ ಸುಬ್ಬಮ್ಮ ರವರಲ್ಲದೇ ಇತರೆ ವಾರಸುದಾರರು ಸಹ ಇರುವುದು ಆರ್‌ಟಿಸಿ ಪ್ರತಿಯಿಂದ ಕಂಡು ಬರುತ್ತದೆ. ಅದರಲ್ಲಿ ಶ್ರೀ ಮಂಜುನಾಥ್ ಇವರು ಸಹ ಜಂಟಿ ಖಾತೆದಾರರೆಂಬುದಾಗಿ ತೋರಿಸಲಾಗಿದೆ. ಆದರೆ, ಶ್ರೀಮತಿ ಸುಬ್ಬಮ್ಮ ರವರು ತಮ್ಮ ಮಕ್ಕಳ ವತಿಯಿಂದ ಮಾತ್ರ ಒಪ್ಪಿಗೆ ಪತ್ರವನ್ನು ಪಡೆದಿರುವುದು ಕಂಡುಬರುತ್ತದೆ ಎಂದು ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯ ನಿರ್ಣಯದಂತೆ ಶ್ರೀ ಮಂಜನಾಥ್ ಆಚಾರಿ ಇವರು ಜಂಟಿ ಖಾತೆಯಲ್ಲಿರುವ ಸ್ಥಿರಾಸ್ತಿಯಲ್ಲಿ ವಿಭಾಗ ಪತ್ರವಾಗದೇ ಬಾಕಿ ಇರುವಾಗ ಏನೊಂದು ಹಕ್ಕಿಲ್ಲದವರಿಗೆ ಮನೆ ಕಟ್ಟಡ ಕಟ್ಟಲು ಆಕ್ಷೇಪಣೆ ವ್ಯಕ್ತ ಪಡಿಸಿರುವ ಹಿನ್ನೆಲೆಯಲ್ಲಿ ಅರ್ಜಿದಾರರಾದ ಶ್ರೀಸದಾಶಿವ ಆಚಾರಿ ಹಾಗೂ ಅವರ ಪತ್ನಿ ಶ್ರೀಮತಿ ಸುಮನಾ ಇವರುಗಳು ಸ್ಥಳದ ಹಕ್ಕುದಾರರಿಂದ ಒಪ್ಪಿಗೆಯನ್ನು ಪಡೆಯದೇ ಬಲಾತ್ಕಾರವಾಗಿ ಮನೆ ಕಟ್ಟಡ ಕಟ್ಟುತ್ತಿರುತ್ತಾರೆಂದು ತಿಳಿಸಿರುವುದರಿಂದ, ಶ್ರೀ ಸದಾಶಿವ ಆಚಾರಿ ಮತ್ತು ಶ್ರೀಮತಿ ಸುಮನಾ ಇವರಿಗೆ ಕಟ್ಟಡ ನಿರ್ಮಿಸಲು ಇದ್ದ ಸೂಕ್ತ ದಾಖಲೆಗಳನ್ನು ಪಂಚಾಯತಿಗೆ ಸಲ್ಲಿಸತಕ್ಕದ್ದು ಮತ್ತು ಪಂಚಾಯತಿ ಪರವಾನಗೆ ಇಲ್ಲದೇ ಕಟ್ಟಡ ಕಟ್ಟುವುದನ್ನು ತಕ್ಷಣ ನಿಲ್ಲಿಸಬೇಕೆಂದು ಸದರಿಯವರಿಗೆ ನೋಟೀಸ್ ನೀಡುವಂತೆ ತೀರ್ಮಾನಿಸಿರುವುದು ಕಂಡು ಬರುತ್ತದೆ. ಸದರಿ ದಿ:31/12/2013ರ ಪಂಚಾಯತಿ ನಿರ್ಣಯವನ್ನು ಹಾಜರುಪಡಿಸಲಾಗಿದೆ ಎಂದು ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಪಂಚಾಯಿತಿ ವತಿಯಿಂದ ಅನಧೀಕೃತ ಕಟ್ಟಡ ಕಟ್ಟುವ ಬಗ್ಗೆ ನೋಟೀಸ್ ನೀಡುವಂತೆ ತೀರ್ಮಾನ ಕೈಗೊಂಡಿದ್ದರೂ, ಸದರಿ ಕಟ್ಟಡವನ್ನು ಕಟ್ಟುತ್ತಿದ್ದು, ಶ್ರೀ ಸದಾಶಿವ ಆಚಾರಿ ಮತ್ತು ಶ್ರೀಮತಿ ಸುಮನಾ ಇವರಿಗೆ ನೋಟೀಸ್ ನೀಡಿರುವುದು ಕಂಡು ಬರುವುದಿಲ್ಲ. ಈ ಬಗ್ಗೆ ಎದುರುದಾರರ ಆಕ್ಷೇಪಣೆ ಸಲ್ಲಿಕೆಯಾಗಿಲ್ಲ ಹಾಗೆಯೇ ಶ್ರೀಮತಿ ಸುಬ್ಬಮ್ಮ ಇವರು ಗುಜ್ಜಾಡಿ ಗ್ರಾಮದ ಸರ್ವೆ ನಂ.55/2 ಕ್ಕೆ ಇತರೆ ವಾರಸುದಾರರು ಇದ್ದರೂ ಸಹ ಅವರುಗಳ ಅನುಮತಿಯನ್ನು ಪಡೆಯದೇ ಇದ್ದರೂ ಅವರಿಗೆ ಕಟ್ಟಡ ರಚನೆ ಬಗ್ಗೆ ಪರವಾನಗೆಯನ್ನು ನೀಡಿರುವುದು ಅಕ್ರಮವೆಂದು ಕಂಡು ಬರುತ್ತದೆ. ಈ ಸಂಬಂಧವು ಸಹ ಎದುರುದಾರರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ ಎಂದು ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

3ನೇ ಎದುರುದಾರರು ತಿಳಿಸಿವಂತೆ ರಾಜೀವ್ ಗಾಂಧಿ ವಸತಿ ಯೋಜನೆಯಡಿ ಶ್ರೀ ಸದಾಶಿವ ಆಚಾರಿ ಇವರಿಗೆ ವಿದ್ಯುತ್ ಸಂಪರ್ಕವನ್ನು ಗ್ರಾಮ ಪಂಚಾಯತಿ ವತಿಯಿಂದ ಬಂದ ಶಿಫಾರಸ್ಸಿನ ಮೇಲೆ ತಾವು ವಿದ್ಯುತ್ ಸಂಪರ್ಕವನ್ನು ಕೊಟ್ಟಿರುವುದಾಗಿ ತಿಳಿಸಿದ್ದು, ಅದಕ್ಕೆ ಪೂರಕವಾಗಿ ಗ್ರಾಮ ಪಂಚಾಯತಿ ವತಿಯಿಂದ ನೀಡಿರುವ ಶಿಫಾರಸ್ಸು ಪತ್ರವನ್ನು ಹಾಜರುಪಡಿಸಿರುತ್ತಾರೆ. ಆದ್ದರಿಂದ, ಸದರಿ ಫಲಾನುಭವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಹಾಗೂ ಮನೆ ಕಟ್ಟಲು ಸ್ವಂತ ಜಾಗ ಇರುವ ಬಗ್ಗೆ ಪರಿಶೀಲಿಸದೆ ಗ್ರಾಮ ಪಂಚಾಯತಿ ವತಿಯಿಂದ ಶಿಫಾರಸ್ಸು ಪತ್ರ ನೀಡಿರುವುದು, ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯವರ ನಿರ್ಲಕ್ಷತನವನ್ನು ತೋರಿಸುತ್ತದೆ. ಆದ್ದರಿಂದ, ಈ ಮೇಲಿನ ಕಾರಣಗಳ ಹಿನ್ನೆಲೆಯಲ್ಲಿ 1ನೇ ಎದುರುದಾರರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ದೃಢಪಟ್ಟಿರುತ್ತದೆ ಎಂದು ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ದೂರಿನಂಶಗಳನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಸದರಿ ದೂರುದಾರರ ದೂರು ಅರ್ಜಿ ಮತ್ತು ಮಾನ್ಯ ಉಪಲೋಕಾಯುಕ್ತ ವರದಿಯಂತೆ ಎದುರುದಾರರಾದ ಶ್ರೀ ರಂಗನಾಥ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುಜ್ಜಾಡಿ ಗ್ರಾಮ ಪಂಚಾಯತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪ್ರಾಮಾಣಿಕತೆ,ಸಂಪೂರ್ಣ ನಿಷ್ಠೆ ತೋರದೆ, ಕರ್ತವ್ಯಲೋಪವೆಸಗಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದದುಕೊಂಡಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮ 1957 ರ 14–ಎ ರನ್ವಯ ಎದುರುದಾರರ ವಿರುದ್ಧ ವಿಚಾರಣೆ ಮಾಡಲು ಈ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ನಿರ್ಣಯಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/444/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 09-06-2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ರಂಗನಾಥ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುಜ್ಜಾಡಿ ಗ್ರಾಮ ಪಂಚಾಯತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು,ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.(ಇದರೊಂದಿಗೆ ಈ ಪ್ರಕರಣದ ಮೂಲ ದಾಖಲಾತಿಯನ್ನು ಪುಟ ಸಂಖ್ಯೆ 01 ರಿಂದ 36 ರವರೆಗೆ ಲಗತ್ತಿಸಲಾಗಿದೆ.)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಂದಾಪು ತಾಲ್ಲೂಕು, ಉಡುಪಿ ಜಿಲ್ಲೆ.
6. ಶ್ರೀ ರಂಗನಾಥ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುಜ್ಜಾಡಿ ಗ್ರಾಮ ಪಂಚಾಯತಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.